



# A – ಲೈನ್ ಕುರ್ತಾ

ನೀವು ನಿಮಗಾಗಿ ಸ್ಟೈಲಿಶಾದ A – ಲೈನ್ ಕುರ್ತಾವನ್ನು ಹೊಲೆಯಲು ಇಚ್ಛಿಸುವಿರಾದರೆ, ಈ ವೀಡಿಯೋ ನಿಮಗಾಗಿ.

**ವಸ್ತುಗಳ ವಿವರ**

3 ಮೀಟರ್ ಬಟ್ಟೆ
ನೆಕ್ ಫೇಸಿಂಗಿಗೆ ½ ಮೀಟರ್ ಕಾಟನ್ ಬಟ್ಟೆ
**www.ushasew.com** ನಿಂದ ಡೌನ್ಲೋಡ್ ಮಾಡಿಕೊಂಡಿರುವ **A** – ಲೈನ್ ಕುರ್ತದ ಟೆಂಪ್ಲೇಟ್
ವಾಟರ್ ಸಾಲ್ಯುಬಲ್ ಮಾರ್ಕರ್
ಸ್ಕೇಲ್
ಮೇಶರಿಂಗ್ ಟೇಪ್
ಕತ್ತರಿ
ಬೀಡಿಂಗ್ ಪಿನ್
ಮ್ಯಾಚಿಂಗ್ ದಾರ

ಈ ವೀಡಿಯೋದಲ್ಲಿ ನೀವು ಟೆಂಪ್ಲೇಟನ್ನು ಬಳಸಿ ಕುರ್ತಾದ ಮುಂಭಾಗ ಹಿಂಭಾಗ, ತೋಳಿನ ಭಾಗದ ಪೀಸನ್ನು ಕತ್ತರಿಸುವುದು, ಫೇಸಿಂಗ್ ಸ್ಟ್ರಿಪ್ಸನ್ನು ಮಾಡುವುದು, ಮುಂಭಾಗ ಮತ್ತು ಹಿಂಭಾಗವನ್ನು ಒಟ್ಟಿಗೆ ಹೊಲೆಯುವುದು, ಫೇಸಿಂಗ್ ಸ್ಟ್ರಿಪನ್ನು ನೆಕ್ ಲೈನಿಗೆ ಜೋಡಿಸುವುದು, ತೋಳನ್ನು ಸೇರಿಸುವುದು ಮತ್ತು ಸೈಡ್ ಸೀಮನ್ನು ಫಿನಿಷ್ ಮಾಡುವುದು ಮತ್ತು ಸ್ಲಿಟ್ಸನ್ನು ಹೆಮ್ ಮಾಡಿ ನೆಕ್ ಲೈನನ್ನು ಮುಗಿಸುವುದನ್ನು ಕಲಿಯುತ್ತೀರ.

**ಹಂತ 1 : ಟೆಂಪ್ಲೇಟಿನಂತೆ ಮಾರ್ಕಿಂಗ್ ಮತ್ತು ಕಟ್ಟಿಂಗ್**

ನಿಮಿಷ್ಟದ ಯಾವುದಾದರು ಬಟ್ಟೆಯನ್ನು ತೆಗೆದುಕೊಳ್ಳಿ, ವೀಡಿಯೋದಲ್ಲಿ ತೋರಿಸಿರುವಂತೆ ಉದ್ದವಾಗಿ ಬಟ್ಟೆಯನ್ನು ಮಡಚಿ. ಈಗ**A** – ಲೈನ್ ಕುರ್ತದ ಮುಂಭಾಗದ ಟೆಂಪ್ಲೇಟನ್ನು ಬಟ್ಟೆಯ ಹಿಂಬದಿಯಲ್ಲಿ ಇಡಬೇಕು. ಬಟ್ಟೆಯ ಮಡಿಕೆಗಳು ಟೆಂಪ್ಲೇಟಿನ ಮಡಿಕೆಗಳಿಗೆ ಹೊಂದುತ್ತಿದೆಯೇ ಎಂದು ಖಚಿತಪಡಿಸಿಕೊಳ್ಳಿ

ಈಗ ಬಟ್ಟೆಗೆ ಟೆಂಪ್ಲೇಟನ್ನು ಪಿನ್ ಮಾಡಬೇಕು. ಬೀಡೆಡ್ ಪಿನ್ ತೆಗೆದುಕೊಂಡು ಗಿ ಪೆನ್ ತೆಗೆದುಕೊಂಡು ಟೆಂಪ್ಲೇಟಿನ ಪೂರ್ತಿ ಟ್ರೇಸ್ ಮಾಡಬೇಕು. ನಂತರ ಪಿನ್ ಗಳನ್ನು ತೆಗೆದು ಪಕ್ಕಕಿಡಿ. ಕತ್ತರಿಯನ್ನು ತೆಗೆದುಕೊಂಡು ಹಾಕಿರುವ ಗೆರೆಯ ಮೇಲೆ ಕತ್ತರಿಸಿ. ಈ ಹಂತದಲ್ಲಿ ಹುಷಾರಾಗಿರಿ ಏಕೆಂದರೆ ಅದು ನಿಮ್ಮ ಪ್ಯಾಟರ್ನ್ ಹರೆಯುವ ಸಾಧ್ಯತೆಯಿದೆ.
ಬಟ್ಟೆಯನ್ನು ಮತ್ತೆ ಉದ್ದವಾಗಿ ಮಡಚಿ ಹಿಂಬದಿಯ ಟೆಂಪ್ಲೇಟನ್ನು ಬಟ್ಟೆಯ ಹಿಂಭಾಗಕ್ಕೆ ಇಡಬೇಕು. ಹಾಗು ಮೊದಲಿನಂತೆ ಎಲ್ಲಾ ವಿಧಾನವನ್ನು ಅನುಸರಿಸಿ.ಟೆಂಪ್ಲೇಟನ್ನು ಅದರ ಜಾಗದಲ್ಲಿ ಬೀಡೆಡ್ ಪಿನ್ನಿಂದ ಪಿನ್ ಮಾಡಿ ನಂತರ ಟ್ರೇಸ್ ಮಾಡಿ. ಟ್ರೇಸಿಂಗ್ ಮಾಡಿದ ಮೇಲೆ ಪಿನ್ ಗಳನ್ನು ತೆಗೆದು ಕತ್ತರಿಯನ್ನು ತೆಗೆದುಕೊಂಡು ಹಾಕಿರುವ ಗೆರೆಯ ಮೇಲೆ ಕತ್ತರಿಸಿ. ನೆಕ್ ಲೈನ್ ಹತ್ತಿರ ಹುಷಾರಾಗಿ ಕತ್ತರಿಸಿ ಇದು ಸರ್ಕ್ಯುಲರ್ ಶೇಪ್ನಲ್ಲಿದೆ. ನಿಮ್ಮ ಅಂತಿಮ ಪೀಸ್ ನೋಡಲು ಹೀಗೆ ಕಾಣಬೇಕು.
ಈಗ ಉಳಿದಿರುವ ಬಟ್ಟೆಯನ್ನು ತೆಗೆದುಕೊಂಡು ಅರ್ಧಕ್ಕೆ ಮಡಚಿ ಬಲಭಾಗ ಬಲಭಾಗವನ್ನು ನೋಡುವಂತೆ ಇರಬೇಕು






ತೋಳಿನ ಭಾಗದ ಟೆಂಪ್ಲೇಟನ್ನು ಬಟ್ಟೆಯ ಮೇಲಿಟ್ಟು ಬೀಡೆಡ್ ಪಿನ್ ಸಹಾಯದಿಂದ ಪಿನ್ ಮಾಡಿ. ಇದು ಮುಗಿಸಿದ ಮೇಲೆ ತೋಳನ್ನು ಟ್ರೇಸ್ ಮಾಡಿ ಟೆಂಪ್ಲೇಟನ್ನು ಅನ್ ಪಿನ್ ಮಾಡಿ. ಟೆಂಪ್ಲೇಟನ್ನು ಪಕ್ಕಕಿಟ್ಟು ಪಿನ್ ಗಳನ್ನು ಮತ್ತೆ ಹಾಕಬೇಕು ಇದು ಬಟ್ಟೆಯನ್ನು ಕತ್ತರಿಸಲು ಸುಲಭವಾಗುವಂತೆ ಭದ್ರಗೊಳಿಸುತ್ತದೆ. ನಂತರ ಕತ್ತರಿಯನ್ನು ಬಳಸಿ ಹಾಕಿರುವ ಗೆರೆಯ ಮೇಲೆ ಕತ್ತರಿಸಿ.


ತೋಳಿನ ಬಟ್ಟೆಯ ಪಿನ್ ತೆಗೆಯಿರಿ. ನಿಮ್ಮ ಹತ್ತಿರ ತೋಳಿನ ಎರಡು ಪೀಸ್ಗಳು ವೀಡಿಯೋದಲ್ಲಿ ತೋರಿಸಿರುವಂತೆ ಇರಬೇಕು.




ಮುಂದೆ ನಮ್ಮ ಪಟ್ಟಿಯಲ್ಲಿ ಫೇಸಿಂಗ್ ಸ್ಟ್ರಿಪನ್ನು ನೆಕ್ ಲೈನ್ ಗೆ ತಯಾರಿಸುವುದು ಮತ್ತು ಅದಕ್ಕೆ ಸುಂದರವಾದ ಫಿನಿಷ್ ಕೊಡಬೇಕು. ಯಾವುದಾದರೂ ಮ್ಯಾಚಿಂಗ್ ಬಟ್ಟೆಯನ್ನು ತೆಗೆದುಕೊಂಡು ಅರ್ಧಕ್ಕೆ ಮಡಚಿ ಅದನ್ನು ಮೇಜಿನ ಮೇಲೆ ಇಡಬೇಕು.ನಂತರ A – ಲೈನ್ ಕುರ್ತದ ಮುಂಭಾಗದ ಟೆಂಪ್ಲೇಟನ್ನು ಇಲ್ಲಿ ತೋರಿಸಿರುವಂತೆ ಬಟ್ಟೆಯ ಮೇಲೆ ಇಡಬೇಕು. ಇದೇ ವಿಧಾನವನ್ನು ಹಿಂಬದಿಯ ಟೆಂಪ್ಲೇಟಿಗೂ ಅನುಸರಿಸಬೇಕು.ಇದು ಕತ್ತಿನ ಹಿಂಭಾಗವಾದ್ದರಿಂದ ಇದು ಕರ್ವ್ ಆಕಾರದಲ್ಲಿರುತ್ತದೆ. ನೆಕ್ ಲೈನನ್ನು ಮತ್ತು ಭುಜದ ಭಾಗವನ್ನು ಮಾರ್ಕ್ ಮಾಡಿ. ಟೆಂಪ್ಲೇಟನ್ನು ತೆಗೆದು ಮೆಶರಿಂಗ್ ಟೇಪಿನಲ್ಲಿ 1.5 ಇಂಚು ಕರ್ವ್ಡ್ ನೆಕ್ ಲೈನನ್ನು ಮಾರ್ಕ್ ಮಾಡಿ. ಇದು ಮುಗಿಸಿದ ನಂತರ ನಿಮ್ಮ ಕೈಯನ್ನು ಬಳಸಿ ಕರ್ವನ್ನು ಮಾರ್ಕಿಂಗ್ ಸಹಾಯದಿಂದ ಬರೆಯಿರಿ. ಈಗ ಮತ್ತೆ ಪಿನ್ ಮಾಡಿ. ಇದು ಹೀಗೆ ಕಾಣಬೇಕು.












**ಹಂತ 2 : ಮುಂಭಾಗ ಮತ್ತು ಹಿಂಭಾಗದ ಪೀಸ್ಗಳನ್ನು ಸೇರಿರುವುದು**











ನಾವೀಗ ಮುಂಭಾಗ ಮತ್ತು ಹಿಂಭಾಗದ ಕುರ್ತಾ ಪೀಸ್ಗಳನ್ನು ಒಟ್ಟಿಗೆ ಸೇರಿಸಬೇಕು. ಈಗ ಪ್ರಾರಂಭಿಸೋಣ, ಮೊದಲು ಕುರ್ತಾದ ಮುಂಭಾಗವನ್ನು ಬಲಭಾಗ ಮೇಲೆ ಬರುವಂತೆ ಮೇಜಿನ ಮೇಲೆ ಇಡಬೇಕು ನಂತರ ಹಿಂಭಾಗದ ಪೀಸನ್ನು ಅದರ ಮೇಲಿಡಬೇಕು. ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ಎರಡೂ ತೋಳನ್ನು ಇಟ್ಟಿಗೆ ಪಿನ್ ಮಾಡೋಣ. ಈಗ ಹೊಲೆಯುವ ಸಮಯ. ಪಿನ್ ಮಾಡಿರುವ ಪೀಸ್ಗಳನ್ನು ಊಷಾ ಜನೋಮ್ ಅಲ್ಯುರ್ ಡಿ ಎಲ್ ಎಕ್ಸ್ ಹೊಲಿಗೆ ಯಂತ್ರದ ಹತ್ತಿರ ತೆಗೆದುಕೊಂಡು ಹೋಗಿ ನಂತರ ಪ್ಯಾಟರ್ನ್ ಸೆಲೆಕ್ಟರನ್ನು A ಇದು ನೇರ ಹೊಲಿಗೆಗಾಗಿ ಮತ್ತು ಸ್ಟಿಚ್ ಲೆಂತ್ ಡಯಲನ್ನು 2.5 ಗೆ ಇಡಬೇಕು. ಪ್ರೆಸ್ಸರ್ ಪುಟ್ಟಿನ ಕೆಳಗೆ ಬಟ್ಟೆಯ ತುದಿಯನ್ನು ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ರಿವೆರ್ಸ್ ಹೊಲಿಗೆಯನ್ನು ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಹಾಕಲು ಮರೆಯಬೇಡಿ ಇದು ಹೊಲಿಗೆಯನ್ನು ಭದ್ರಗೊಳಿಸುತ್ತದೆ. ಹೊಲೆಯುವಾಗ ಪಿನ್ನಗಳನ್ನು ತೆಗೆಯಿರಿ.ಹೆಚ್ಚಾದ ದಾರವನ್ನು ಕತ್ತರಿಸಿ ಇನ್ನೊಂದು ತೋಳನ್ನು ಹೊಲೆಯೋಣ. ಈಗ ಎರಡೂ ತೋಳನ್ನು ಹೊಲೆದಿದ್ದೇವೆ.









**ಹಂತ 3 : ನೆಕ್ ಫೇಸಿಂಗ್ ಸ್ಟ್ರಿಪನ್ನು ತಯಾರಿಸಿ ಅದನ್ನು ನೆಕ್ ಲೈನಿಗೆ ಸೇರಿಸುವುದು**

ಈಗ ಮುಂಭಾಗ ಮತ್ತು ಹಿಂಭಾಗದ ಫೇಸಿಂಗ್ ಸ್ಟ್ರಿಪನ್ನು ತೆಗೆದುಕೊಂಡು ಪಿನ್ ತೆಗೆಯಿರಿ. ಅದನ್ನು ಓಪೆನ್ ಮಾಡಿ. ಈಗ ಹಿಂಬದಿಯ ಸ್ಟ್ರಿಪನ್ನು ಮುಂಬಾಗದ ಸ್ಟ್ರಿಪನ್ನು ಬಲಭಾಗ ಬಲಭಾಗವನ್ನು ನೋಡುವಂತೆ ಇಟ್ಟು ಪಿನ್ ಮಾಡಿ. ಎರಡೂ ಭುಜದ ಭಾಗವನ್ನು ಒಟ್ಟಿಗೆ ವೀಡಿಯೋದಲ್ಲಿ ತೋರಿಸಿರುವಂತೆ ಪಿನ್ ಮಾಡಿ.

ಪಿನ್ ಮಾಡಿರುವ ಫೇಸಿಂಗ್ ಸ್ಟ್ರಿಪನ್ನು ಹೊಲಿಗೆ ಯಂತ್ರದ ಬಳಿ ತೆಗೆದುಕೊಂಡು ಹೋಗಿ ಹೊಲೆಯಲು ಪ್ರಾರಂಭಿಸಿ. ಹೊಲೆಯಲು ಪ್ರಾರಂಭಿಸಿದಾಗ ಪಿನ್ಗಳನ್ನು ತೆಗೆಯಿರಿ ಮತ್ತು ರಿವರ್ಸ್ ಹೊಲಿಗೆಯನ್ನು ಹಾಕಲು ಮರೆಯಬೇಡಿ. ಇದು ಈ ರೀತಿಯ ಸಣ್ಣ ಸ್ಟ್ರಿಪಿಗೂ ತುಂಬಾ ಮುಖ್ಯ. ಇದೇ ರೀತಿ ಇನ್ನೊಂದು ಕಡೆನೂ ಹೊಲೆಯಿರಿ.

ಇದು ಮುಗಿದ ಮೇಲೆ ನಾವು ಫೇಸಿಂಗ್ ಸ್ಟ್ರಿಪನ್ನು ಕುರ್ತಾ ಪಿಸ್ಸಿಗೆ ಸೇರಿಸಬೇಕು. ಇದು ನಮ್ಮ ಭುಜದ ಭಾಗ ಮತ್ತು ಇದು ನೆಕ್ ಲೈನ್ ನಾವು ಸ್ಟ್ರಿಪ್ಸನ್ನು ಇದಕ್ಕೆ ಹೊಲೆಯಬೇಕು. ಕುರ್ತಾವನ್ನು ಬಲಭಾಗ ಬಲಭಾಗವನ್ನು ಕಾಣುವಂತೆ ತಿರುಗಿಸಿ. ಕಾರ್ನರ್ಸನ್ನು ಅಲೈನ್ ಮಾಡಿ ಅದನ್ನು ಸರಿಯಾದ ಜಾಗದಲ್ಲಿ ಪಿನ್ ಮಾಡಿ. ವೀಡಿಯೋದಲ್ಲಿ ತೋರಿಸಿರುವಂತೆ ನಾವು ಫೇಸಿಂಗ್ ಸ್ಟ್ರಿಪನ್ನು ಕುರ್ತಾಗೆ ಹೊಲೆಯಬೇಕು. ಹೊಲೆಯುವಾಗ ಪಿನ್ಗಳನ್ನು ತೆಗೆಯಿರಿ,ಇದಾದ ಮೇಲೆ V ನೆಕ್ ಮೇಲೆ ಮತ್ತು ಸರ್ಕ್ಯುಲರ್ ಬ್ಯಾಕ್ ಪೂರ್ತಿಯಾಗಿ ಹೊಲೆಯಬೇಕು.ಬಟ್ಟೆ ಭದ್ರವಾಗಿದೆಯೇ ಎಂದು ಖಾತ್ರಿಪಡಿಸಿಕೊಳ್ಳಿ,ಹುಷಾರಾಗಿ ಕೆಳಗಿನ ಭಾಗವನ್ನು ಕತ್ತರಿಸಿ ಹೊಸದಾಗಿ ಹಾಕಿರುವ ಹೊಲಿಗೆಯ ಮೇಲೆ ಕತ್ತರಿಸಬೇಡಿ. ವೀಡಿಯೋದಲ್ಲಿ ತೋರಿಸಿರುವಂತೆ ಸ್ಟ್ರಿಪನ್ನು ತಿರುಗಿಸಿ ಸ್ಟ್ರಿಪ್ಸಿನ ಮೇಲೆ ಟಾಪ್ ಸ್ಟಿಚಸನ್ನು ಹಾಕಬೇಕು. ಕತ್ತಿನ ಭಾಗದ ಸುತ್ತಲೂ ಹೊಲೆಯಿರಿ.ನಿಮ್ಮ ಹೊಲಿಗೆ ಹೀಗೆ ಕಾಣಬೇಕು. ಈಗ ನೆಕ್ ಲೈನನ್ನು ಹೀಗೆ ಬಿಡೋಣ.





**ಹಂತ 4 : ತೋಳನ್ನು ಸೇರಿಸುವುದು**


ನಮ್ಮ ಪಟ್ಟಿಯಲ್ಲಿ ಮುಂದಿನದು ತೋಳನ್ನು ಸೇರಿಸುವುದು. ಕುರ್ತಾವನ್ನು ಬಲಭಾಗದ ಮೇಲಕ್ಕಿಟ್ಟು ತೋಳಿನ ಪೀಸನ್ನು ಅದರ ಪಕ್ಕದಲ್ಲಿಡಿ.ಈಗ ತೋಳನ್ನು ಅರ್ಧಕ್ಕೆ ಮಡಚಿ ತೋಳಿನ ಮಧ್ಯದಲ್ಲಿ ನಾಚನ್ನು ಮಾಡಬೇಕು. ತೋಳನ್ನು ಕುರ್ತಾದ ಮೇಲೆ ಬಲಭಾಗ ಬಲಭಾಗವನ್ನು ಇಟ್ಟು ನಾಚನ್ನು ಭುಜದ ಭಾಗದ ಲೈನ್ಗೆ ಅಲೈನ್ ಮಾಡಿ ಸರಿಯಾದ ಜಾಗದಲ್ಲಿ ಪಿನ್ ಮಾಡಿ. ತೋಳಿನ ಪೂರ್ತಿ ಸುತ್ತಲೂ ಪಿನ್ ಮಾಡಿ.


ಇದೇ ವಿಧಾನವನ್ನು ಇನ್ನೊಂದು ಕಡೆನೂ ಮಾಡಬೇಕು. ತೋಳನ್ನು ಅರ್ಧಕ್ಕೆ ಮಡಚಿ ತೋಳಿನ ಮಧ್ಯದಲ್ಲಿ ನಾಚನ್ನು ಮಾಡಬೇಕು, ಈ ನಾಚನ್ನು ಭುಜದ ಲೈನ್ಗೆ ಅಲೈನ್ ಮಾಡಿ ಪಿನ್ ಮಾಡಿ. ಇದು ಮುಗಿಸಿದ ಮೇಲೆ ಪಿನ್ ಮಾಡಿರುವ ಪೀಸಸನ್ನು ಸೇರಿಸಬೇಕು. ತೋಳಿನ ತುದಿಯನ್ನು









ಹಂತ 5 : ಸೈಡ್ ಸೀಮ್ಸನ್ನು ಹೊಲೆದು,ತೋಳು ಮತ್ತು ಬಾಟಮ್ ಹೆಮ್ ಮಾಡುವುದು

ತೋಳನ್ನು ಹೊಲಿದ ನಂತರ ನಾವು ಸೈಡ್ ಸೀಮ್ಸನ್ನು ಹೊಲೆಯೋಣ. ತೋಳಿನ ತೆರೆದಿರುವ ಭಾಗವನ್ನು ಸೇರಿಸಿ ಪಿನ್ ಮಾಡಿ ಮತ್ತು ವೀಡಿಯೋದಲ್ಲಿ ತೋರಿಸಿರುವಂತೆ ಸರಿಯಾದ ಜಾಗದಲ್ಲಿ ಪಿನ್ ಮಾಡಿ. ಹಿಪ್ಸ್ ಭಾಗ ತಲುಪಿದಾಗ ಇದನ್ನು ನಿಲ್ಲಿಸಿ ಏಕೆಂದರೆ ನಾವು ಸೈಡ್ ಸ್ಲಿಟನ್ನು ಮಾಡಬೇಕು. ಇಂಚು ಕುರ್ತಾದ ಕೆಳಭಾಗದಿಂದ  ಅಳತೆ ಮಾಡಿ ಮಾರ್ಕ್ ಮಾಡಿ.


ಸ್ಲಿಟಿನ ಆಳ ಒಬ್ಬರಿಂದ ಒಬ್ಬರಿಗೆ ವ್ಯತ್ಯಾಸವಾಗುತ್ತದೆ.

ನಾವು ಅಳತೆಯನ್ನು 19 ಇಂಚು ತೆಗೆದುಕೊಂಡಿದ್ದೇವೆ ಆದರೆ ನೀವು ನಿಮ್ಮ ಇಷ್ಟಕ್ಕೆ ತಕ್ಕಂತೆ ಬದಲಿಸಬಹುದು. ಇನ್ನೊಂದೌ ಕಡೇನೂ 19 ಇಂಚು ಅಳತೆ ಮಾಡಿ ಸ್ಲಿಟಿನ ಮೇಲೆ ಬಟ್ಟೆಗೆ ಪಿನ್ ಮಾಡಿ


ಈಗ ಪಿನ್ ಮಾಡಿರುವ ಸೈಡ್ ಸೀಮನ್ನು ಹೊಲೆಯುವ ಸಮಯ. ಪ್ರೆಸ್ಸರ್ ಫುಟಿಗೆ ತೋಳನ್ನು ಹೆಮ್ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಹೊಲಿಗೆಯನ್ನು ಭದ್ರಗೊಳಿಸಲು ರಿವರ್ಸ್ ಹೊಲಿಗೆಯನ್ನು ಹಾಕಲು ಮರೆಯಬೇಡಿ. ಪಿನ್ಗಳನ್ನು ಹೊಲೆಯುವಾಗ ತೆಗೆಯುತ್ತಾ ಹೋಗಬೇಕು. ಸೈಡ್ ಸ್ಲಿಟಿನ ಮಾರ್ಕ್ ಹತ್ತಿರ ತಲುಪಿದಾಗ ನಿಲ್ಲಿಸಿ  ಇನ್ನೊಂದು ಕಡೆಗೆ ಬದಲಾಯಿಸಿ ತುದಿಯಿಂದ ತೋಳಿನ ಮಾರ್ಕ್ ವರೆಗೂ ಹೊಲೆಯಿರಿ.

ಇದನ್ನು ಎರಡೂ ಕಡೆ ಮುಗಿಸಿದ ಮೇಲೆ, ಜಿಗ್ ಜಾಗ್ ಹೊಲಿಗೆಯನ್ನು ಸೈಡ್ ಸೀಮ್ಸಿಗೆ ಫ್ರೇಡ್ ಏಡ್ಜಸ್ ತಡೆಯುವುದಕ್ಕಾಗಿ ಹಾಕಬೇಕು. ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು **C** ಮತ್ತು ಹೊಲಿಗೆಯ ಉದ್ದ 1.5 ಗೆ ಇಟ್ಟು ಹೊಲೆಯಿರಿ. ಈ ವಿಧಾನ ಪುನರಾವರ್ತನೆ ಎನಿಸಬಹುದು ಆದರೆ ಇದು ಬಟ್ಟೆಗೆ ಅದ್ಭುತವಾದ ಫಿನಿಷನ್ನು ಕೊಡುತ್ತದೆ. ಸ್ಲಿಟಿನ ಪ್ರಾರಂಭದಿಂದ ಶುರುಮಾಡಿ ತೋಳಿನ ವರೆಗೂ ಎರಡೂ ಕಡೆ ಹೊಲೆಯಬೇಕು. ನಾವು ತೋಳಿಗೆ ಜಿಗ್ ಜಾಗ್ ಹೊಲಿಗೆಯನ್ನೂ ಹಾಕಬೇಕು. ಇದಾದ ಮೇಲೆ ನಿಮ್ಮ ಹೊಲಿಗೆ ಹೀಗೆ ಕಾಣಬೇಕು.

ನಾವೀಗ ಸೈಡ್ಗಳನ್ನು ಹೆಮ್ ಮಾಡೋಣ. ಇದನ್ನು ಒಂದೇ ನಿರಂತರವಾದ ಹೊಲಿಗೆಯಲ್ಲಿ ಮಾಡಬೇಕು. ನಾವು ಹೇಗೆ ಎಂದು ತೋಸಿಸುತ್ತೇವೆ. ಮುಂಭಾಗದ ಪೀಸಿನ ತುದಿಯಿಂದ ಪ್ರಾರಂಭಿಸಿ, ಬಟ್ಟೆಯನ್ನು ಅರ್ಧ ಇಂಚು ಎರಡು ಬಾರಿ ಮಡಚಿ ಮತ್ತು ಪ್ರೆಸ್ಸರ್ ಫುಟಿನ ಕೆಳಗೆ ಇಡಬೇಕು. ಹೊಲೆಯುವ ಮುನ್ನ ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು **A** ಹೊಲಿಗೆಯ ಉದ್ದವನ್ನು 2,5 ಗೆ ರೀಸೆಟ್ ಮಾಡಿ ಹೊಲೆಯಿರಿ ಸ್ಲಿಟಿನ ಇನ್ನೊಂದು ಕಡೆವರೆಗೂ ಹೊಲೆಯಬೇಕು. ಪೀವಟ್ ಟೆಕ್ನಿಕನ್ನು ಬಳಸಿ ಬಟ್ಟೆಯ ಮುಂಭಾಗದಿಂದ ಹಿಂಭಾಗಕ್ಕೆ ತರಬೇಕು. ಈ ಟೆಕ್ನಿಕ್ ಬಟ್ಟೆಯನ್ನು ಸೂಜಿಯನ್ನು ತೆಗೆಯದೆ ತಿರುಗಿಸುವುದಾಗಿದೆ. ಈಗ ಹಿಂಬದಿಯ ಬಟ್ಟೆಯವರೆಗೂ ಹೀಗೆ ಹೊಲೆಯಿರಿ, ಹೆಚ್ಚಾದ ಬಟ್ಟೆಯನ್ನು ಕತ್ತರಿಸಿ ಮತ್ತು ರಾ ಅಂಚನ್ನು ಮಡಚಬೇಕು. ಮತ್ತು ಹೊಲೆಯುವುದನ್ನು ಮತ್ತು ಮಡಚುವುದನ್ನು ಮಾಡುತ್ತಾ ಹೋಗಿ. ಹಿಂಬದಿಯ ಬಟ್ಟೆಯ ಇನ್ನೊಂದು ತುದಿಗೆ ಇಲ್ಲಿ ತೋರಿಸಿರುವಂತೆ ಮಡಚಿ ಪಿವಟಿಂಗನ್ನು ಮುಂದುವರಿಸಿ ಹೊಲೆಯಿರಿ. ಮೊಂಭಾಗದ ಸ್ಲಿಟಿಗೆ ಪ್ರಾರಂಭದಿಂದ ಪಿವಟ್ ಮಾಡುತ್ತಾ ತುದಿಯವರೆಗೂ ಮುಂದುವರಿಸಿ. ಈ ಉಪಾಯ ಹೊಲಿಗೆಯನ್ನು ಮುರಿಯದಿರಲು ಮತ್ತು ಹೆಮ್ಮಿಂಗನ್ನು ಒಂದೇ ಹೊಲಿಗೆಯಲ್ಲಿ ಹಾಕಲು ಸಹಾಯವಾಗುತ್ತದೆ. ಒಳ್ಳೆಯ ಕೆಲಸ!




ಮುಂದೆ, ನಾವು ತೋಳನ್ನು ಹೆಮ್ಮಿಂಗ್ ಮಾಡುವುದು. ಇದು ಕೆಳಭಾಗದ ಹೆಮ್ಮಿಂಗ್ಗಿಂತ ಸುಲಭ. ತೋಳನ್ನು ಅರ್ಧ ಇಂಚು ಎರಡು ಬಾರಿ ಮಡಚಿ. ಆದರೆ ಹೊಲೆಯುವ ಮುನ್ನ ಮಷೀನಿನ ಅಸ್ಸೆಸರಿ ಬಾಕ್ಸನ್ನು ತೆಗೆಯಿರಿ, ಇದು ಸರ್ಕ್ಯುಲರ್ ಸೀಮ್ಸ್ ಹೊಲೆಯಲು ಸಹಾಯವಾಗುತ್ತದೆ. ತೋಳನ್ನು ಹೆಮ್ಮಿಂಗ್ ಮಾಡಲು ಪ್ರಾರಂಭಿಸಿ. ಇದು ಮುಗಿದ ನಂತರ ಹೆಚ್ಚುವರಿಯಾದ ದಾರವನ್ನು ಕತ್ತರಿಸಿ ಮತ್ತು ಇದೇ ವಿಧಾನವನ್ನು ಇನ್ನೊಂದು ತೋಳಿಗೂ ಪುನರಾವರ್ತಿಸಿ.



**ಹಂತ 6 : ನೆಕ್ ಲೈನನ್ನು ಹೊಲೆಯುವುದು**

ಕೊನೆಯ ಹಂತ ಈ ವಿಧಾನದಲ್ಲಿ ಎಂದರೆ ನೆಕ್ ಲೈನನ್ನು ಹೆಮ್ ಮಾಡುವುದು, ನಾವು ಇದಕ್ಕೆ ಕೈಯನ್ನು ಬಳಸಿ ಹೊಲೆಯಬೇಕು. ಫೇಸಿಂಗ್ ಸ್ಟ್ರಿಪನ್ನು ಒಳಬಾಗಕ್ಕೆ ವಿರುದ್ಧ ಭಾಗದ ಕಡೆ ಮಡಚಬೇಕು ಮತ್ತು ಕೈಯಲ್ಲಿ ಇಲ್ಲಿ ತೋರಿಸಿರುವಂತೆ ತುದಿಯನ್ನು ಹೊಲೆಯಬೇಕು. ನೆಕ್ ಲೈನ್ ಪೂರ್ತಿಯಾಗಿ ಹೀಗೆ ಮಾಡಿ ಮತ್ತು ಹೊಲೆಯುತ್ತಾ ಮಡಚುತ್ತಾ ಹೋಗಿ. ನಾವೀಗ ಮುಗಿಸಿದ್ದೇವೆ!



ನಿಮ್ಮ ಅಂತಿಮ ಕುರ್ತಾ ನೋಡಲು ಹೀಗೆ ಕಾಣಬೇಕು. ಇದು ನಿಜವಾಗಿಯೂ ಪರಿಪೂರ್ಣವಾಗಿದೆ ಅಲ್ವಾ? ಆರಾಮದಾಯಕ, ಸ್ಟೈಲಿಷ್ ಹಾಗು ಚಿಕ್, ಇದು ಯಾರಾದರೂ ಕೆಳುವಂತಹ ಪರಿಪೂರ್ಣವಾದ ಸಂಯೋಜನೆ. ನಿಮಗೆ ಹೇಗೆ ಎನಿಸುತ್ತದೆ ಎಂದು ನಮಗೆ ತಿಳಿಸಿ ಮತ್ತು ಲೈಕ್ ಮಾಡಿ ಕಮೆಂಟ್ ಮಾಡಿ ಸಬ್ಸೈಬ್ ಮಾಡಲು ಮರೆಯಬೇಡಿ